1934

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಕರ್ನಾಟಕ ಸ್ಟೇಟ್ ಆಗ್ರೋ ಕಾರನ್ ಪ್ರಾಡಕ್ಟ್ಸ್ ಲಿಮಿಟೆಡ್, ಸಂಸ್ಥೆಯನ್ನು ಸಮಾಪನಗೊಳಿಸುವಿಕೆ –157 ಜನ ಅಧಿಕಾರಿ/ನೌಕರರ ಸ್ವಯಂ ನಿವೃತ್ತಿ ಯೋಜನೆ ಬಗ್ಗೆ.

**ಸರ್ಕಾರದ ಆದೇಶ ಸಂಖ್ಯೆ: ಕೃತೋಇ 04 ಕೃಇಮಂ 2010**
**ಬೆಂಗಳೂರು, ದಿನಾಂಕ: 29ನೇ ಮಾರ್ಚ್ 2012.**

**ಓದಲಾಗಿದೆ:**

1) ಸರ್ಕಾರದ ಆದೇಶ ಸಂಖ್ಯೆ: ಕೃತೋಇ 35 ಕೃಇಮಂ 2009. ದಿನಾಂಕ: 24-09-2009.
2) ಕರ್ನಾಟಕ ಸ್ಟೇಟ್ ಆಗ್ರೋ ಕಾರನ್ ಪ್ರಾಡಕ್ಟ್ಸ್ ಲಿಮಿಟೆಡ್ ಸಂಸ್ಥೆಯ ಪತ್ರ ಸಂಖ್ಯೆ: ಕೆಎಸ್ಎಸಿಪಿಎಲ್/ಆಡಳಿತ/ವಿಆರ್‌ಎಸ್/1142/2011-12, ದಿನಾಂಕ: 15.12.2011
3) ಸರ್ಕಾರದ ಆದೇಶ ಸಂಖ್ಯೆ: ಕೃತೋಇ 04 ಕೃಇಮಂ 2010. ದಿನಾಂಕ: 22-02-2012.
4) ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ: FD 109 Exp-4/2011, ದಿನಾಂಕ: 28.03.2012

*********

**ಪ್ರಸ್ತಾವನೆ:**

ಮೇಲೆ ಕ್ರಮಾಂಕ (1) ರಲ್ಲಿ ಓದಲಾದ ದಿನಾಂಕ: 24-09-2009 ರ ಆದೇಶದಲ್ಲಿ ಕರ್ನಾಟಕ ಸ್ಟೇಟ್ ಆಗ್ರೋ ಕಾರನ್ ಪ್ರಾಡಕ್ಟ್ಸ್ ಲಿಮಿಟೆಡ್, ಸಂಸ್ಥೆ ಇತ್ತೀಚಿನ ದಿನಗಳಲ್ಲಿ ಆರ್ಥಿಕ ಮುಗ್ಗಟ್ಟು ಅನುಭವಿಸುತ್ತಿರುವ ಬಗ್ಗೆ ವಿವರಿಸಿ ಸಂಕಷ್ಟದಲ್ಲಿರುವ ಸಂಸ್ಥೆಗೆ ತನ್ನಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ನೌಕರರನ್ನು ಸ್ವಯಂ ನಿವೃತ್ತಿಗೊಳಿಸಲು 2009-10 ರಲ್ಲಿ ಸಂಸ್ಥೆಗೆ ರೂ.6.72 ಕೋಟಿ ಹಣವನ್ನು ಸಾಫ್ಟ್‌ಲೋನ್ ಆಗಿ ಬಿಡುಗಡೆ ಮಾಡಿ 124 ಅಧಿಕಾರಿ/ನೌಕರರನ್ನು ಸ್ವಯಂ ನಿವೃತ್ತಿಗೊಳಿಸಲು ಅನುಮತಿ ನೀಡಲಾಗಿದೆ.

ಮೇಲೆ ಕ್ರಮಾಂಕ (2) ರಲ್ಲಿ ಓದಲಾದ ದಿನಾಂಕ: 15.12.2011ರ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಸ್ಟೇಟ್ ಆಗ್ರೋ ಕಾರನ್ ಪ್ರಾಡಕ್ಟ್ಸ್ ಲಿಮಿಟೆಡ್, ಇವರು ತಮ್ಮ ಸಂಸ್ಥೆಯ ಉಳಿದ 157 ಜನ ಅಧಿಕಾರಿ/ನೌಕರರನ್ನು ಸ್ವಯಂ ನಿವೃತ್ತಿ ಯೋಜನೆಗೆ ಹಣ ಬಿಡುಗಡೆ ಮಾಡುವಂತೆ ಕೋರಿರುವ ಪ್ರಯುಕ್ತ ಮೇಲೆ (3) ರಲ್ಲಿ ಓದಲಾದ ದಿನಾಂಕ: 22.02.2012ರ ಆದೇಶದಲ್ಲಿ ಮತ್ತು ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ: ಆಇ 124 ವೆಚ್ಚ-4/2012, ದಿನಾಂಕ: 01.03.2012ರಲ್ಲಿನ ಸ್ಪಷ್ಟೀಕರಣದಂತೆ ರೂ.2.00 ಕೋಟಿ ಹಣವನ್ನು ಲೆಕ್ಕಶೀರ್ಷಿಕೆ 6852-02-190-4-02-394(ಯೋಜನೇತರ) ರಡಿಯಲ್ಲಿ ಸಾಲ ರೂಪದಲ್ಲಿ ಕೆಲವು ಷರತ್ತಿನೊಂದಿಗೆ ಬಿಡುಗಡೆ ಮಾಡಿದೆ.

6

ಸರ್ಕಾರದಿಂದ ಈಗಾಗಲೇ ನಿರ್ದೇಶಕರು ಕರ್ನಾಟಕ ರಾಜ್ಯ ಪತ್ರ ಇಲಾಖೆಗೆ ಪತ್ರ ಬರೆದು ಹಾಲಿ ಇರುವ 157 ಅಧಿಕಾರಿ/ನೌಕರರನ್ನು ಸ್ವಯಂ ನಿವೃತ್ತಿ ಯೋಜನೆಯಡಿ ನಿವೃತ್ತಿಗೊಳಿಸಲು ಬೇಕಾಗಿರುವ ಹಣದ ಬಗ್ಗೆ ಲೆಕ್ಕ ಪತ್ರಗಳನ್ನು ಪರಿಶೋಧಿಸಿ ಕೊಡಲು ಕೋರಲಾಗಿದೆ. ಲೆಕ್ಕ ಪರಿಶೋಧನಾ ತಂಡ, ಸಂಸ್ಥೆಗೆ ಭೇಟಿ ನೀಡಿ ಲೆಕ್ಕ ಪರಿಶೋಧನೆ ಮಾಡಿ ಕೊಡಲಾಗುವುದು ಎಂದು ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರಿಗೆ ನಿಯಂತ್ರಕರು, ರಾಜ್ಯ ಲೆಕ್ಕಪತ್ರ ಇಲಾಖೆ, ಬೆಂಗಳೂರು, ಇವರು ಪತ್ರದ ಮುಖಾಂತರ ಅವರ ಪತ್ರ ಸಂಖ್ಯೆ: ರಾಲೆಪ/ಲೆತವಿ/ಎ4/31/ಕ.ಆ.ಇ./2011-12 ದಿನಾಂಕ:24.03.2012 ರಲ್ಲಿ ತಿಳಿಸಿರುತ್ತಾರೆ. ಆರ್ಥಿಕ ಇಲಾಖೆಯು ಮೇಲೆ ಓದಲಾದ (4) ರಲ್ಲಿನ ಅನಧಿಕೃತ ಟಿಪ್ಪಣಿಯಲ್ಲಿ ಲೆಕ್ಕ ಶೀರ್ಷಿಕೆ 6852-02-190-4-02-394(ಯೋಜನೇತರ) ರಡಿಯಲ್ಲಿ ರೂ.15.60 ಕೋಟಿ ಸಾಲವನ್ನು ಮಂಜೂರು ಮಾಡಿದ್ದು, ಈ ಹಣವನ್ನು ಸ್ವಯಂ ನಿವೃತ್ತಿ ಯೋಜನೆಯ ನಿವೃತ್ತಿ ಸೌಲಭ್ಯಗಳನ್ನು ಲೆಕ್ಕ ಪರಿಶೋಧನೆಗೊಂಡ(vett) ನಂತರ ಉಪಯೋಗಿಸುವಂತೆ ತಿಳಿಸಿರುತ್ತದೆ. ಆರ್ಥಿಕ ಇಲಾಖೆಯು ಮಂಜೂರು ಮಾಡಿರುವಂತೆ, ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಆಗ್ರೋ ಕಾರನ್ ಪ್ರಾಡಕ್ಟ್ಸ್ ಲಿಮಿಟೆಡ್, ರವರ ಕೋರಿಕೆಯನ್ನು ಪರಿಶೀಲಿಸಿದ ಸರ್ಕಾರ ಕೆಳಕಂಡ ಆದೇಶ ಹೊರಡಿಸಲು ತೀರ್ಮಾನಿಸಿದೆ. ಅದರಂತೆ ಕೆಳಕಂಡ ಆದೇಶ.

## ಆದೇಶ

ಪ್ರಸ್ತಾವನೆಯಲ್ಲಿ ವಿವರಿಸಿದ ಕಾರಣಗಳ ಹಿನ್ನಲೆಯಲ್ಲಿ, ಕರ್ನಾಟಕ ಸ್ಟೇಟ್ ಆಗ್ರೋ ಕಾರನ್ ಪ್ರಾಡಕ್ಟ್ಸ್ ಲಿಮಿಟೆಡ್ ಸಂಸ್ಥೆಯ ನೌಕರರನ್ನು ಸ್ವಯಂ ನಿವೃತ್ತಿ ಯೋಜನೆಯಲ್ಲಿ ನಿವೃತ್ತಿಗೊಳಿಸಲು ರೂ.15.60 ಕೋಟಿ (ರೂ. ಹದಿನೈದು ಕೋಟಿ ಅರವತ್ತು ಲಕ್ಷ ಮಾತ್ರ) ಹಣವನ್ನು ಸಾಲದ ರೂಪದಲ್ಲಿ ಆದೇಶ ಸಂಖ್ಯೆ: ಕೃತೋಇ 04 ಕೃಇಮಂ 2010, ದಿನಾಂಕ: 22.02.2012 ರಲ್ಲಿ ವಿಧಿಸಿರುವ ಷರತ್ತಿನಂತೆಯೇ ಮಂಜೂರು ಮಾಡಿ ಆದೇಶಿಸಿದೆ.

ಈ ವೆಚ್ಚವನ್ನು ಕರ್ನಾಟಕ ಸ್ಟೇಟ್ ಆಗ್ರೋ ಕಾರನ್ ಪ್ರಾಡಕ್ಟ್ಸ್ ಲಿಮಿಟೆಡ್‌ಗೆ ಲೆಕ್ಕಶೀರ್ಷಿಕೆ 6852-02-190-4-02-394(ಯೋಜನೇತರ) ರಡಿ State Renewal Fundನಿಂದ ಭರಿಸತಕ್ಕದ್ದು. ಈ ಹಣವನ್ನು ಸಂಸ್ಥೆಯು ಸಿಂಡಿಕೇಟ್ ಬ್ಯಾಂಕ್‌ನಲ್ಲಿ ಹೊಂದಿರುವ ಖಾತೆಯಲ್ಲಿ ಇಡಲು ಅನುಮತಿ ನೀಡಿದೆ ಹಾಗೂ ಸ್ವಯಂನಿವೃತ್ತಿ ಯೋಜನೆಯ ಸ್ವಯಂನಿವೃತ್ತಿ ಸೌಲಭ್ಯಗಳನ್ನು ರಾಜ್ಯ ಲೆಕ್ಕಪತ್ರ ಇಲಾಖೆಯಿಂದ ಪರಿಶೋಧನೆಗೊಂಡ (Vett) ನಂತರ ಉಪಯೋಗಿಸತಕ್ಕದ್ದು.

192



ಈ ಆದೇಶವನ್ನು ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ: ಎಫ್‌ಡಿ 109 ವೆಚ್ಚ-4/2011 ದಿನಾಂಕ:28-03-2012 ರಲ್ಲಿ ನೀಡಿದ ಸಹಮತಿಯ ಮೇರೆಗೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಮಂಜುನಾಥ ಪಾಟೀಲ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿ ಇಲಾಖೆ.

**ಇವರಿಗೆ: -**

1. ಮಹಾಲೇಖಪಾಲರು ಕರ್ನಾಟಕ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ, ವಿಕಾಸಸೌಧ, ಬೆಂಗಳೂರು.
3. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಸ್ಟೇಟ್ ಆಗ್ರೋ ಕಾರನ್ ಪ್ರಾಡಕ್ಟ್ಸ್ ಲಿಮಿಟೆಡ್, ಹೆಬ್ಬಾಳ, ಬೆಂಗಳೂರು.
4. ಆಯುಕ್ತರು/ನಿರ್ದೇಶಕರು ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ,
5. ನಿರ್ದೇಶಕರು, ರಾಜ್ಯ ಹುಜೂರು ಖಜಾನೆ ಇಲಾಖೆ, ಬೆಂಗಳೂರು.
6. ಮಾನ್ಯ ಕೃಷಿ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.
7. ಸರ್ಕಾರದ ಪ್ರಧಾನ ಕಾರ್ಯದರ್ಶಿ ಸಾರ್ವಜನಿಕ ಉದ್ದಿಮೆಗಳ ಇಲಾಖೆ, ಬೆಂಗಳೂರು.
8. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, (ಆಹಾರ ಸಂಸ್ಕರಣೆ & ಕಟಾವು ತಂತ್ರಜ್ಞಾನ),
9. ಸರ್ಕಾರದ ಕಾರ್ಯದರ್ಶಿಗಳು, ಕೃಷಿ ಇಲಾಖೆ ಇವರ ಆಪ್ತ ಕಾರ್ಯದರ್ಶಿ.
10. ಸರ್ಕಾರದ ಪ್ರಧಾನ ಕಾರ್ಯದರ್ಶಿ ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು, ಇವರ ಆಪ್ತ ಕಾರ್ಯದರ್ಶಿ.
11. ಸರ್ಕಾರದ ಜಂಟಿ ಕಾರ್ಯದರ್ಶಿ, ಕೃಷಿ ಇಲಾಖೆ, ಇವರ ಆಪ್ತ ಸಹಾಯಕರು.
12. ಶಾಖಾ ರಕ್ಷ ಕಡತ/ ಹೆಚ್ಚುವರಿ ಪ್ರತಿ.